1. ಪ್ರಾಥಮಿಕ ಆರೋಗ್ಯ ಘಟಕ	30,00000
2. ಪ್ರಾಥಮಿಕ ಆರೋಗ್ಯ ಕೇಂದ್ರ	50,00000
3. ಸಮುದಾಯ ಆರೋಗ್ಯ ಕೇಂದ್ರ	2,00,00000
4. ತಾಲ್ಲೂಕು ಮಟ್ಟದ ಪ್ರಾಥಮಿಕ ಆರೋಗ್ಯ ಘಟಕ	1,00,00000
5. ತಾಲ್ಲೂಕು ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರ	3,00,00000
6. ತಾಲ್ಲೂಕು ಮಟ್ಟದ ಸಮುದಾಯ ಆರೋಗ್ಯ ಕೇಂದ್ರ	3,00,00000
7. ಸಾರ್ವಜನಿಕ ಆಸ್ಪತ್ರೆ	3,00,00000
8. ಸಮೀಕ್ಷೆ ಶಿಕ್ಷಣ ಮತ್ತು ಕುಷ್ಟ ರೋಗ ಕೇಂದ್ರ	4,00000
9. ಆರೋಗ್ಯ ಉಪ ಕೇಂದ್ರ	5,00000
10. ಸಂಚಾರಿ ಆರೋಗ್ಯ ಘಟಕಗಳು	50,00000
11. ಜಿಲ್ಲಾ ಕ್ಷಯರೋಗ ಹತೋಟಿ ಕೇಂದ್ರಗಳು	1,00,00000
12. ದಂತ ಚಿಕಿತ್ಸಾಲಯಗಳು	10,00000

13. ಉಳಿದ ಜಿಲ್ಲಾ ಆಸ್ಪತ್ರೆ, ವೈದ್ಯಕೀಯ ಶಿಕ್ಷಣ ಆಸ್ಪತ್ರೆ ಮತ್ತು ಮತ್ತು ಸಾರ್ವಜನಿಕ ಆಸ್ಪತ್ರೆಗಳಿಗೆ ಅವುಗಳ ಹಾಸಿಗೆಗಳ ಸಂಖ್ಯೆಗನುಗುಣವಾಗಿ ಔಷಧಿಗಳನ್ನು ಸರಬರಾಜು ಮಾಡಲಾಗುತ್ತದೆ.

ವಿಷಯ:- ರೋಣ್ ತಾಲ್ಲೂಕು ನೆರೇಗಲ್ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 254(635)

ಶ್ರೀ ಶೈಲಪ್ಪ ಬಿದರೂರ್ (ರೋಣ್):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರೋಣ್ ತಾಲ್ಲೂಕು ನರೇಗಲ್ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡಕ್ಕಾಗಿ ಜಿಲ್ಲಾ ಪರಿಷತ್‌ನವರು ಕಳೆದ 45 ವರ್ಷಗಳಿಂದ ಪ್ರತಿ ವರ್ಷ ಅನುದಾನ ಬಿಡುಗಡೆ ಮಂಜೂರು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈವರೆಗೂ ಕಟ್ಟಡದ ಕೆಲಸ ಪ್ರಾರಂಭವಾಗದಿರಲು ಕಾರಣಗಳೇನು? ಹಾಗೂ ಈ ಕೆಲಸವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಡಾ: ಹೆಚ್.ಸಿ.ಮಹದೇವಪ್ಪ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) -- ಹೌದು --

ಆ) ನಿಯಮಗಳ ಮೇರೆಗೆ ಕಟ್ಟಡದ ಅಂದಾಜಿನ ಶೇ.30ರಷ್ಟು ಅನುದಾನವನ್ನು ಲಭ್ಯಪಡಿಸಿಕೊಂಡು ಜಿಲ್ಲಾ ಪಂಚಾಯತ್ ಪ್ರಸ್ತಾವನೆ ಸಲ್ಲಿಸದೆ ಇರುವುದರಿಂದ ಮಂಜೂರಾತಿ ನೀಡಿರುವುದಿಲ್ಲ. ಧಾರವಾಡ ಜಿಲ್ಲಾ ಪಂಚಾಯಿತಿಯವರು 95-96ನೇ ಸಾಲಿನಲ್ಲಿ ಒಟ್ಟು ಅಂದಾಜಿನ ಶೇ.30ರಷ್ಟು ಅನುದಾನ ಒದಗಿಸಿಕೊಂಡು ಪ್ರಸ್ತಾವನೆಯನ್ನು ರೂಪಿಸಿಕೊಂಡರೆ ಕಾಮಗಾರಿ ಕೈಗೆತ್ತಿಕೊಳ್ಳಲು ಮಂಜೂರಾತಿ ನೀಡಲು ಪರಿಶೀಲಿಸಲಾಗುವುದು.

ವಿಷಯ:- ಗಜೇಂದ್ರಗಡ ಆಸ್ಪತ್ರೆಗೆ ಸಿಬ್ಬಂದಿಗಳ ನೇಮಕಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 255(634)

ಶ್ರೀ ಶೈಲಪ್ಪ ಬಿದರೂರ್(ರೋಣ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೋಣ ತಾಲ್ಲೂಕು, ಗಜೇಂದ್ರಗಡ ನಗರದಲ್ಲಿ 30 ಹಾಸುಗೆಯುಳ್ಳ ಸುಸಜ್ಜಿತವಾದ ಆಸ್ಪತ್ರೆಯನ್ನು ಕಟ್ಟಿಸಿ, ಮೂರು ವರ್ಷಗಳಾದರೂ ಅಲ್ಲಿ ವೈದ್ಯರು ಮತ್ತು ಇತರೆ ಸಿಬ್ಬಂದಿಯನ್ನು ನೇಮಿಸದೆ ಇರುವುದು ನಿಜವೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು, ಮತ್ತು ಸರ್ಕಾರವು ವೈದ್ಯರು ಹಾಗೂ ಸಿಬ್ಬಂದಿ ವರ್ಗದವರನ್ನು ತ್ವರಿತವಾಗಿ ನೇಮಿಸಲು ಕೈಗೊಳ್ಳಲಿರುವ ಕ್ರಮಗಳೇನು?

ಡಾ: ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) -- ಹೌದು --